ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ. ಎಂ. ಎಫ್. ಸಿ.ರವರ ನ್ಯಾಯಾಲಯ,
ಮಡಿಕೇರಿ.

**ಸಿ.ಸಿ.ನಂಃ 1126/24**

ಪಿಡಬ್ಲ್ಯೂಃ –3

ಸಿಡಬ್ಲ್ಯೂಃ –3

ದಿನಾಂಕಃ 04.12.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು | – ಚಿದ್ವಿಲಾಸ್ |
| ತಂದೆಯ ಹೆಸರು | – ವಿಜಯ ಕುಮಾರ್ |
| ವಯಸ್ಸು | – 27 ವರ್ಷ |
| ವೃತ್ತಿ | – ಖಾಸಗಿ ಕೆಲಸ |
| ವಾಸಸ್ಥಳ | – ಸಂಪಾಜೆ |

ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ಯವರಿಂದಃ–

ಚಾಸಾ–1 ನನ್ನ ತಂದೆ, ಚಾಸಾ–2 ನನ್ನ ತಾಯಿ. ಚಾಸಾ–4 ರಿಂದ 17 ನನಗೆ ಗೊತ್ತು. 08.02.2024 ರಂದು ಬೆಳಿಗ್ಗೆ 9–30 ಗಂಟೆಗೆ ನಾನು ಹಾಗೂ ಚಾಸಾ–1 ಮತ್ತು 2 ರವರು ಕಲ್ಲುಗುಂಡಿಯಲ್ಲಿರುವ ನಮ್ಮ ಅಂಗಡಿಗೆ ಹೋದೆವು. ನಾನು ಹಾಗೂ ಚಾಸಾ–1 ಸುಳ್ಯದ ಹೆಚ್.ಡಿ.ಎಫ್ .ಸಿ ಬ್ಯಾಂಕ್ ನಲ್ಲಿ ಕೆಲಸ ಇದೆ ಎಂದು ಹೇಳಿ ನಾವಿಬ್ಬರು ಸುಳ್ಯಕ್ಕೆ ಹೋದೆವು. ಅದೇ ದಿನ ಸಂಜೆ ಸುಮಾರು 7–00 ಗಂಟೆಗೆ ನಾನು ಹಾಗೂ ಚಾಸಾ–1 ರವರು ಕಲ್ಲುಗುಂಡಿಗೆ ವಾಪಾಸ್ಸು ಬಂದಿರುತ್ತೇವೆ. ಚಾಸಾ–1 ಮತ್ತು 2 ರವರು ಒಟ್ಟಿಗೆ ಸಂಪಾಜೆಯಲ್ಲಿರುವ ನಮ್ಮ ಮನೆಗೆ ಹೋಗಿರುತ್ತಾರೆ. ನಾನು ಅವರ ಹಿಂದೆ ಹೊರಟಿರುತ್ತೇನೆ. ಅದೇ ದಿನ ರಾತ್ರಿ ಸುಮಾರು 8–00 ಗಂಟೆ ಸುಮಾರಿಗೆ ಚಾಸಾ–1 ಮತ್ತು 2 ರವರು ಮನೆ ತಲುಪಿ ನೋಡಿದಾಗ ನಮ್ಮ ಮನೆಯ ಮುಂಭಾಗಿಲಿನ ಯಾರೋ ಚಿಲಕ ಕೊಂಡಿಯನ್ನು ಮುರಿದು, ಮನೆಯ ಒಳಗೆ ಹೋಗಿ ಮನೆಯ ರೂಮಿನಲ್ಲಿರುವ ಬೀರುವಿನಲ್ಲಿರುವ ರೂ. 20,000/– ಹಣವನ್ನು, ಡ್ರಾಯರ್ ನಲ್ಲಿ ಇದ್ದ ಚಿನ್ನದ ಬಳೆ, ಚಿನ್ನದ ರಿಂಗ್, ಚಿನ್ನದ ಚೈನು ಕಳುವಾಗಿದೆ ಎಂದು ಚಾಸಾ–1 ರವರು ನನಗೆ ಮನೆಗೆ ಬಂದ ಮೇಲೆ ಹೇಳಿರುತ್ತಾರೆ.

ಮನೆಯ ಹತ್ತಿರ ಮುರಿದು ಹಾಕಿದ್ದ ಮುಂಭಾಗಿಲಿನ ಚಿಲಕದ ಕೊಂಡಿ, ಲಾಕ್ ಬಿದ್ದಿತ್ತು. ಚಾಸಾ–1 ರವರು ಪೊಲೀಸರಿಗೆ ದೂರು ನೀಡಿರುತ್ತಾರೆ. ನಂತರ ಪೊಲೀಸರು ಹಾಗೂ ಶ್ವಾನದಳದವರು ಹಾಗೂ ಬೆರಳಚ್ಚು ತಜ್ಞರು ನಮ್ಮ ಮನೆಗೆ ಬಂದಿರುತ್ತಾರೆ. ನಮ್ಮ ಮನೆಯಲ್ಲಿ ಸುಮಾರು 47 ಗ್ರಾಂ ನಷ್ಟು ಚಿನ್ನದ ಒಡವೆಗಳು ಕಳ್ಳತನ ಆಗಿರುತ್ತದೆ. ಚಾಸಾ–2 ರವರು ಮನೆಯಲ್ಲಿ ಪರಿಶೀಲನೆ ಮಾಡಿದಾಗ 2 ಚಿನ್ನದ ಉಂಗುರಗಳು ದೊರೆತಿರುತ್ತದೆ. 4 ದಿನಗಳು ಆದ ಮೇಲೆ ಪೊಲೀಸರು ಆರೋಪಿತರನ್ನು ನಮ್ಮ ಮನೆಗೆ ಕರೆದುಕೊಂಡು ಬಂದಿರುತ್ತಾರೆ ಹಾಗೂ ಮಹಜರ್ ಮಾಡಿರುತ್ತಾರೆ. ಆರೋಪಿತರನ್ನು ನಾನು ನೋಡಿದರೆ ಗುರುತಿಸುತ್ತೇನೆ ಎಂದು ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಮುರಿದು ಬಿದ್ದಿದ್ದ ನಮ್ಮ ಮನೆಯ ಚಿಲಕದ ಕೊಂಡಿ ಮತ್ತು ಲಾಕನ್ನು ನೋಡಿದರೆ ಗುರುತಿಸುತ್ತೇನೆ ಎಂದು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ಮು.ಮಾ 1 ಮತ್ತು 4 ಎಂದು ಗುರುತಿಸಲಾಗಿದೆ. ಆರೋಪಿಗಳು ಕೃತ್ಯಕ್ಕೆ ಬಳಸಿದ್ದ ಸುತ್ತಿ ಹಾಗೂ ಸ್ಕ್ರೂ-ಡ್ರೈವರನ್ನು ನಾನು ನೋಡಿದರೆ ಗುರುತಿಸುತ್ತೇನೆ ಎಂದು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ಮು.ಮಾ 2 ಮತ್ತು 3 ಎಂದು ಗುರುತಿಸಲಾಗಿದೆ. ನಾನು ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ.

ಪಾಟೀ ಸವಾಲುಃ – ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಖರ್ಚು ವಿಧಿಸಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/–***

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ. ಎಂ. ಎಫ್. ಸಿ, ಮಡಿಕೇರಿ.